# ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ


**ಮುಖ್ಯ ಅಭಿಯಂತರರವರ ಕಾರ್ಯಾಲಯ**

ಜಲಮಂಡಳಿ ಆವರಣ, ಸರ್. ಎಂ. ವಿಶ್ವೇಶ್ವರಯ್ಯ ರಸ್ತೆ, ಧಾರವಾಡ – 580 001

**Off(ಕಚೇರಿ) : 0836 – 2447090, Fax(ಫ್ಯಾಕ್ಸ್) : 0836 –2446890**

**E-mail : kwbcen@gmail.com**


**ಸಂಖ್ಯೆ: ಕಜಮ/ಮುಅ(ಧಾ)/ವಿಭಾಗ ಧಾರವಾಡ/2018-19/ 2566** **ದಿನಾಂಕ: 11-01-2019**

## ಕಚೇರಿ ಆದೇಶ

**ವಿಷಯ:** ಕಾರ್ಯಪಾಲಕ ಅಭಿಯಂತರರು, ಕನನೀಸ ಮತ್ತು ಒಚ ಮಂಡಳಿ ಧಾರವಾಡ ವಿಭಾಗ ಕಛೇರಿಯನ್ನು ಉತ್ತರ ಕನ್ನಡ ಜಿಲ್ಲೆಯ ಕೇಂದ್ರಸ್ಥಾನವಾದ ಕಾರವಾರಕ್ಕೆ ಸ್ಥಳಾಂತರಿಸುವ ಕುರಿತು.

**ಉಲ್ಲೇಖ:** ದಿನಾಂಕ 05-12-2018ರಂದು ನಡೆದ 285ನೇ ಸಭೆಯ ನಡವಳಿ ಸಂ.ಕಜಮ/ಕಾರ್ಯದರ್ಶಿ/ಸ.ಅ.(ಮಂ)/285ನೇ ಮಂ.ಸ./2164/2018-19, ದಿನಾಂಕ 29-12-2018.

**ಪ್ರಸ್ತಾವನೆ:**

ಧಾರವಾಡ ನಗರದಲ್ಲಿ 2 ವಿಭಾಗಗಳಿವೆ. ನಿರ್ವಹಣಾ ವಿಭಾಗ ಮತ್ತು ಯೋಜನಾ ವಿಭಾಗ. ಯೋಜನಾ ವಿಭಾಗದಡಿ ಧಾರವಾಡ ಮತ್ತು ಕಾರವಾರ ಜಿಲ್ಲೆಗಳು ಬರುತ್ತವೆ. ವಿಭಾಗ ವ್ಯಾಪ್ತಿಯಲ್ಲಿ 3 ಉಪ ವಿಭಾಗಗಳಿದ್ದು, ಧಾರವಾಡ ನಗರದಲ್ಲಿ 2 ಉಪ ವಿಭಾಗಗಳು ಮತ್ತು ಕಾರವಾರದಲ್ಲಿ ಒಂದು ಉಪ ವಿಭಾಗ ಕಾರ್ಯ ನಿರ್ವಹಿಸುತ್ತಿದೆ. ನಿರ್ವಹಣಾ ವಿಭಾಗ, ಧಾರವಾಡ ಕಚೇರಿಯಡಿ ಧಾರವಾಡದಲ್ಲಿ 2 ನಿರ್ವಹಣಾ ಉಪ ವಿಭಾಗಗಳು ಕಾರ್ಯ ನಿರ್ವಹಿಸುತ್ತಿವೆ.

ಉತ್ತರ ಕನ್ನಡ ಜಿಲ್ಲೆ ಮೇಲ್ಭಾಗ ಪಟ್ಟಣಗಳಾದ ಶಿರಸಿ, ಸಿದ್ದಾಪುರ, ಮುಂಡಗೋಡು, ಯಲ್ಲಾಪುರ, ಹಳಿಯಾಳ, ದಾಂಡೇಲಿ ಪಟ್ಟಣಗಳಲ್ಲಿನ ನೀರು ಸರಬರಾಜು ಮತ್ತು ಒಳಚರಂಡಿ ಯೋಜನಾ ಕಾಮಗಾರಿಗಳ ಅನುಷ್ಠಾನ ಉಸ್ತುವಾರಿ ನೋಡಿಕೊಳ್ಳಲು ಶಿರಸಿ ನಗರದಲ್ಲಿ ಮಂಡಳಿ ಪ್ರಾರಂಭ ಪೂರ್ವದಲ್ಲಿ ಉಪ ವಿಭಾಗ ಕಚೇರಿ ಇತ್ತು. ಸದರಿ ಉಪ ವಿಭಾಗವನ್ನು ಕ್ವಾಸಿಪ್ ಉಪ ವಿಭಾಗ ಎಂದು ಹೆಸರಿಸಿ ದಿನಾಂಕ : 01-09-2004 ರಂದು ಧಾರವಾಡಕ್ಕೆ ಸ್ಥಳಾಂತರಿಸಲಾಗಿದೆ. ಪ್ರಸ್ತುತ ಉಪ ವಿಭಾಗ ವ್ಯಾಪ್ತಿಯಲ್ಲಿ ಉತ್ತರ ಕನ್ನಡ ಜಿಲ್ಲೆಯ 6 ಪಟ್ಟಣಗಳು ಮತ್ತು ಹುಬ್ಬಳ್ಳಿ-ಧಾರವಾಡ ನಗರದ ನೀರು ಸರಬರಾಜು ಮತ್ತು ಒಳಚರಂಡಿ ಯೋಜನಾ ಕಾಮಗಾರಿಗಳ ಉಸ್ತುವಾರಿ ಇದೆ. ಮತ್ತು ಧಾರವಾಡ ಉಪವಿಭಾಗದಡಿ, ಕುಂದಗೋಳ, ಅಳ್ನಾವರ, ಅಣ್ಣಿಗೇರಿ, ಕಲಘಟಗಿ ಮತ್ತು ನವಲಗುಂದ ಪಟ್ಟಣಗಳ ನೀರು ಸರಬರಾಜು ಮತ್ತು ಒಳಚರಂಡಿ ಯೋಜನಾ ಕಾಮಗಾರಿಗಳು ಪ್ರಗತಿಯಲ್ಲಿರುತ್ತವೆ.

ಧಾರವಾಡದಲ್ಲಿ ಹಾಲಿ ಇರುವ ವಿಭಾಗವನ್ನು ಕಾರವಾರ ಪಟ್ಟಣಕ್ಕೆ ಸ್ಥಳಾಂತರಿಸಿ, ಉತ್ತರ ಕನ್ನಡ ಜಿಲ್ಲೆಯ ಶಿರಸಿ, ಸಿದ್ದಾಪುರ, ಮುಂಡಗೋಡ, ಯಲ್ಲಾಪುರ, ಹಳಿಯಾಳ, ಕಾರವಾರ, ಅಂಕೋಲ, ಹೊನ್ನಾವರ, ಕುಮಟಾ, ಜಾಲಿ, ದಾಂಡೇಲಿ ಮತ್ತು ಭಟ್ಕಳ ಪಟ್ಟಣಗಳಲ್ಲಿ ಕೈಗೊಳ್ಳುವ ಯೋಜನಾ ಕಾಮಗಾರಿಗಳ ಉಸ್ತುವಾರಿ ವಹಿಸುವುದು ಸೂಕ್ತವೆಂಬ ಅಭಿಪ್ರಾಯದ ವಿಷಯವನ್ನು ದಿನಾಂಕ 05-12-2018ರಂದು ನಡೆದ ಮಂಡಳಿಯ 285ನೇ ಸಭೆಯಲ್ಲಿ ಚರ್ಚಿಸಿ ಹಾಗೂ ತೀರ್ಮಾನಕ್ಕಾಗಿ ಮಂಡಿಸಲಾಗಿತ್ತು. ಮಂಡಳಿಯ ವಿಷಯ ಸಂಖ್ಯೆ 285 :21 ರಲ್ಲಿ ಸುಧೀರ್ಘ ಚರ್ಚೆಯ ನಂತರ,



Scanned with CamScanner

ವಿಭಾಗ ಧಾರವಾಡ ಕಛೇರಿಯನ್ನು ಕಾರವಾರ ಪಟ್ಟಣಕ್ಕೆ ಸ್ಥಳಾಂತರಿಸಿ, ಉತ್ತರ ಕನ್ನಡ ಜಿಲ್ಲೆಯ 12 ಸ್ಥಳೀಯ ಸಂಸ್ಥೆಗಳ ಉಸ್ತುವಾರಿ ವಹಿಸಲು ನಿರ್ಣಯಿಸಿರುತ್ತದೆ. ಅದರಂತೆ ಆದೇಶ.

**ಆದೇಶ:**

ಮಂಡಳಿಯು, ದಿನಾಂಕ 05-12-2018ರಂದು ನಡೆದ 285ನೇ ಸಭೆಯಲ್ಲಿ ವಿಭಾಗ ಧಾರವಾಡ ಕಚೇರಿಯನ್ನು ಉತ್ತರ ಕನ್ನಡ ಜಿಲ್ಲೆ ಕಾರವಾರ ನಗರಕ್ಕೆ ಸ್ಥಳಾಂತರಿಸಿ, ಉತ್ತರ ಕನ್ನಡ ಜಿಲ್ಲೆಯ 12 ಸ್ಥಳೀಯ ಸಂಸ್ಥೆಗಳ ನೀರು ಸರಬರಾಜು ಮತ್ತು ಒಳಚರಂಡಿ ಯೋಜನಾ ಕಾಮಗಾರಿಗಳ ಉಸ್ತುವಾರಿ ವಹಿಸಲು ನಿರ್ಣಯಿಸಿರುತ್ತದೆ. ಅದರಂತೆ ವಿಭಾಗ ಧಾರವಾಡ ಕಚೇರಿಯನ್ನು ಉತ್ತರ ಕನ್ನಡ ಜಿಲ್ಲೆ ಕಾರವಾರ ನಗರಕ್ಕೆ ಸಿಬ್ಬಂದಿ ಸಮೇತ ಸ್ಥಳಾಂತರಿಸಲು ಆದೇಶಿಸಲಾಗಿದೆ. ಪ್ರಯುಕ್ತ ಮಂಡಳಿ ಆದೇಶದಂತೆ, ಶೀಘ್ರವೇ ಸೂಕ್ತ ಕ್ರಮ ಕೈಗೊಳ್ಳಲು ತಿಳಿಸಲಾಗಿದೆ.

ಸಹಿ/-
ಮುಖ್ಯ ಅಭಿಯಂತರರು,
ಕನನೀಸ ಮತ್ತು ಒಚಮಂಡಳಿ, ಧಾರವಾಡ.

1) ಪ್ರತಿಯನ್ನು ಮಾನ್ಯ ನಗರಾಭಿವೃದ್ಧಿ ಸಚಿವರ ಆಪ್ತ ಕಾರ್ಯದರ್ಶಿಯವರು, ವಿಕಾಸ ಸೌಧ, ಬೆಂಗಳೂರು ಇವರ ಮಾಹಿತಿಗಾಗಿ ಸಲ್ಲಿಸುತ್ತಾ, ವಿಷಯವನ್ನು ಮಾನ್ಯ ಸಚಿವರ ದಯಾಪರ ಗಮನಕ್ಕೆ ತರಲು ಕೋರಲಾಗಿದೆ.
2) ಪ್ರತಿಯನ್ನು ಮಾನ್ಯ ಅಧ್ಯಕ್ಷರು, ಕನನೀಸ ಮತ್ತು ಒಚ ಮಂಡಳಿ, ಬೆಂಗಳೂರು, ಇವರ ದಯಾಪರ ಮಾಹಿತಿಗಾಗಿ ಸಲ್ಲಿಸಲಾಗಿದೆ.
3) ಪ್ರತಿಯನ್ನು ವ್ಯವಸ್ಥಾಪಕ ನಿರ್ದೇಶಕರು, ಕನನೀಸ ಮತ್ತು ಒಚ ಮಂಡಳಿ, ಬೆಂಗಳೂರು, ಇವರ ದಯಾಪರ ಮಾಹಿತಿಗಾಗಿ ಸಲ್ಲಿಸಲಾಗಿದೆ.
4) ಪ್ರತಿಯನ್ನು ಮುಖ್ಯ ಅಭಿಯಂತರು, ಕನನೀಸ ಮತ್ತು ಒಚ ಮಂಡಳಿ, ಬೆಂಗಳೂರು/ ಬೆಂಗಳೂರು (ವಿ & ಉ)/ಮೈಸೂರು/ ಕಲಬುರಗಿ, ಇವರ ಮಾಹಿತಿಗಾಗಿ ಕಳುಹಿಸಲಾಗಿದೆ.
5) ಪ್ರತಿಯನ್ನು ಮುಖ್ಯ ಲೆಕ್ಕಾಧಿಕಾರಿಗಳು, ಕನನೀಸ ಮತ್ತು ಒಚ ಮಂಡಳಿ, ಬೆಂಗಳೂರು, ಇವರಿಗೆ ಮಾಹಿತಿಗಾಗಿ ಕಳುಹಿಸಲಾಗಿದೆ.
6) ಪ್ರತಿಯನ್ನು ಕಾರ್ಯದರ್ಶಿ, ಕನನೀಸ ಮತ್ತು ಒಚ ಮಂಡಳಿ, ಬೆಂಗಳೂರು, ಇವರಿಗೆ ಮಾಹಿತಿಗಾಗಿ ಕಳುಹಿಸಲಾಗಿದೆ.
7) ಪ್ರತಿಯನ್ನು ಕಾರ್ಯಪಾಲಕ ಅಭಿಯಂತರು, ಕನನೀಸ ಮತ್ತು ಒಚ ಮಂಡಳಿ, ವಿಭಾಗ, ಧಾರವಾಡ, ಇವರ ಮಾಹಿತಿಗಾಗಿ ಹಾಗೂ ಕಾರವಾರ ವಿಭಾಗ ಕಛೇರಿಗೆ, ಸಿಬ್ಬಂದಿ ಸಮೇತ ಸ್ಥಳಾಂತರಿಸಲು ಶೀಘ್ರ ಅಗತ್ಯ ಕ್ರಮವನ್ನು ಕೈಗೊಳ್ಳುವುದು.
8) ಪ್ರತಿಯನ್ನು ಕಾರ್ಯಪಾಲಕ ಅಭಿಯಂತರು, ಕನನೀಸ ಮತ್ತು ಒಚ ಮಂಡಳಿ, ವಿಭಾಗ, ಗದಗ/ ಧಾರವಾಡ/ ಬೆಳಗಾವಿ/ ನಿರ್ವಹಣಾ ವಿಭಾಗ, ಧಾರವಾಡ/ ಹುಬ್ಬಳ್ಳಿ/ ಬೆಂಗಳೂರು/ ಚಿತ್ರದುರ್ಗ/ ಮೈಸೂರು/ ಮೈಸೂರು ಜೆ ನರ್ಮ್ / ಮಂಡ್ಯ/ ಹಾಸನ/ ಮಂಗಳೂರು/ ಬೀದರ್/ ಶಿವಮೊಗ್ಗ/ ಕೋಲಾರ/ ತುಮಕೂರು/ ಕಲಬುರ್ಗಿ/ ಬಳ್ಳಾರಿ, ಇವರ ಮಾಹಿತಿಗಾಗಿ ಕಳುಹಿಸಲಾಗಿದೆ.
9) ಬಿಡಿ ಪ್ರತಿ / ಕಛೇರಿ ಕಡತಕ್ಕೆ.

11/01/2019

ಮುಖ್ಯ ಅಭಿಯಂತರರು,
ಕನನೀಸ ಮತ್ತು ಒಚ ಮಂಡಳಿ, ಧಾರವಾಡ.
11/01/19

\\192.0.60.18\e\HRD-1\Ofc Order - reg.shifting of Dharwad dn to Karwar town.doc18

Scanned with CamScanner